"ಈಗ ನೀವು ಹೋಗಬಹುದು... ಆದರೆ ಮತ್ತೊಮ್ಮೆ ಇಲ್ಲಿ ಬರಬೇಕಾಗಬಹುದು" ಎಂದರು ಗಂಭೀರವಾಗಿ.

"ರವಿಕಾಂತ್‌ನನ್ನು ಕರೆಸಿರಿ."

ಇಡೀ ಹಾಲ್‌ನಲ್ಲಿದ್ದವರೆಲ್ಲಾ ಸ್ತಬ್ಧರಾದರು.

ಇಡೀ ಘಟನೆಯ ಪ್ರತ್ಯಕ್ಷ ಸಾಕ್ಷಿ...

ಯಾರ ಸಾಕ್ಷಿಯಮೇಲೆ ಇಡೀ ಶ್ರೀರಂಗಾಚಾರ್ ಅವರ ಕಡೆಯ ಪ್ರಕರಣದ ಸೋಲು ಗೆಲುವು ನಿಂತಿತ್ತೋ ಅವನನ್ನು ಕರೆಯಿಸಿದ್ದರು. ಅವನ ಹೇಳಿಕೆಯನ್ನು ನ್ಯಾಯಾಧೀಶರು ಒಪ್ಪಿಬಿಟ್ಟರೆ... ನವೀನ್‌ಗೆ ಶಿಕ್ಷೆ ಗ್ಯಾರಂಟಿ.

ಭೂಷಣ್ ಹಿಂದಿನ ದಿನವೇ ರವಿಕಾಂತನನ್ನು ಕೂರಿಸಿಕೊಂಡು ಅವನ ಹೇಳಿಕೆಯನ್ನು ತೋರಿಸಿ ಅವನಿಗೆ ಕೇಳಬಹುದಾದ ಪ್ರಶ್ನೆಗಳು, ಅದಕ್ಕೆ ಹೇಳಬೇಕಾದ ಉತ್ತರಗಳನ್ನೆಲ್ಲಾ ಹೇಳಿಕೊಟ್ಟಿದ್ದ.

"ನಾನು ಸತ್ಯವನ್ನೇ ಹೇಳುವುದು ನನಗೆ ಭಯ ಇಲ್ಲ... ನಾನು ನೋಡಿದ್ದೇ ಹೇಳುತ್ತೇನೆ" ಎಂದಿದ್ದ ರವಿಕಾಂತ, ಕಟಕಟೆಯಲ್ಲಿ ನಿಂತ ತಕ್ಷಣ ಕೊಂಚ ಹೆದರಿದ, ಹಣೆಯಲ್ಲಿ ಸಣ್ಣದಾಗಿ ಬೆವರು ಮೂಡತೊಡಗಿತು.

"ಸತ್ಯ ಹೇಳದಿದ್ದರೆ ಮಾತ್ರ ಹೆದರಬೇಕು ಇಲ್ಲದಿದ್ದರೆ ಹೆದರುವ ಅವಶ್ಯಕತೆಯಿಲ್ಲ" ಗಂಭೀರವಾಗಿ ನುಡಿದರು.

ಮತ್ತೊಮ್ಮೆ ಅದೇ ಟ್ರಿಕ್... ನ್ಯಾಯಾಧೀಶರಿಗೆ ಒಂದು ಸಣ್ಣ ಅನುಮಾನ ಬರುವಂತೆ ಮಾಡುವುದು!

ಒಬ್ಬ ಲಾಯರ್ ಕೇವಲ ನ್ಯಾಯಶಾಸ್ತ್ರ ತಿಳಿದಿದ್ದರೆ ಸಾಲದು, ಅವನಿಗೆ ಮನಃಶಾಸ್ತ್ರದ ಬಗ್ಗೆಯೂ ತಿಳಿದಿರಬೇಕು. ಕಟಕಟೆಯಲ್ಲಿದ್ದವನು ನಿಜ ಹೇಳುತ್ತಿದ್ದಾನಾ ಅಥವಾ ಸುಳ್ಳು ಹೇಳುತ್ತಿರುವನಾ ಎಂದು ತಿಳಿಯುವದಕ್ಕಿಂತ ಅವನ ಬಾಯಿಂದ ತನಗೇನು ಬೇಕೋ ಆ ರೀತಿಯ ಮಾತುಗಳನ್ನು ಹೊರಡಿಸಬೇಕು. ಆಗಲೇ ಜಯ ಸಾಧ್ಯ ಎಂದು ನಂಬಿದ್ದರು ಶ್ರೀರಂಗಾಚಾರ್. ಆ ನಂಬಿಕೆಯೇ ಅವರನ್ನು ಅಜೇಯರನ್ನಾಗಿ ಮಾಡಿತ್ತು.

"ನಾನು ನೋಡಿದ ಸತ್ಯವನ್ನೇ ಹೇಳುತ್ತೇನೆ ಅದಕ್ಕೇಕೆ ಭಯ" ಎಂದ ರವಿಕಾಂತ.

"ನೀವು ನೋಡಿದ್ದೇ ಸತ್ಯ ಎಂದು ಹೇಗೆ ಹೇಳುತ್ತೀರಿ?"

ಅವರ ಪ್ರಶ್ನೆಗೆ ತಬ್ಬಿಬ್ಬಾದ ರವಿಕಾಂತ.

"ನೀವು ಈ ಕೇಸ್‌ನ ಪ್ರೈಮ್ ವಿಟ್ನೆಸ್... ನಿಮ್ಮ ಹೇಳಿಕೆಯ ಮೇಲೆ ನವೀನ್ ಅವರ ಜೀವನ ನಿಂತಿದೆ. ಹಾಗಾಗಿ ನೀವು ನಿಜವನ್ನೇ ಹೇಳುತ್ತೀರಿ ಎಂದು ನಂಬಿದ್ದೇನೆ. ಹಾಗೂ ನನ್ನ ಪ್ರಶ್ನೆಗಳಿಗೆ ಸತ್ಯವಾದ ಉತ್ತರ ಕೊಡುತ್ತೀರಾ ಎಂದು ನಂಬಿದ್ದೇನೆ."

ರವಿಕಾಂತ್ ತಲೆಯಾಡಿಸಿದ.

"ಹೇಳಿ ಅಂದು ನೀವು ಏನು ನೋಡಿದಿರಿ?"

"ಸರ್ ಎಂದಿನಂತೆ ಅಂದೂ ಕೂಡಾ ನನ್ನ ರೂಮಿನಲ್ಲಿ ಓದಿಕೊಳ್ಳುತ್ತಿದ್ದೆ. ಯಾರೋ ಜೋರಾಗಿ ಚೀರಿದ ಶಬ್ದವಾಯಿತು... ಎದ್ದು ನನ್ನ ರೂಮಿನ ಕಿಟಕಿ ಬಾಗಿಲು ತೆರೆದು ನೋಡಿದೆ, ಅಲ್ಲಿ ಎದುರುಮನೆಯ ನವೀನ್ ಒಂದು ಹುಡುಗಿಗೆ ಚಾಕು ಹಾಕುತ್ತಿದ್ದುದನ್ನು ನಾನು ನೋಡಿದೆ... ಭಯದಿಂದ ಒಂದೆರಡು ಕ್ಷಣ ಕಲ್ಲಾದೆ. ನಂತರ ಸಾವರಿಸಿಕೊಂಡು ಕೆಳಕ್ಕೆ ಓಡಿದೆ. ನಾನು ಕೆಳಕ್ಕೆ ಇಳಿದು ಬರುವಷ್ಟರಲ್ಲಿ ದಿಲ್ ಬಾಗ್ ಸಿಂಗ್ ಬಂದಿದ್ದರು. ಅವರು ನವೀನ್ ನನ್ನು ಮನೆಯೊಳಗೆ ಓಡಿ ಹೋಗಿದ್ದನ್ನು ನೋಡಿದರಂತೆ."